2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

ಸಿ ಸಿ ನಂ.778/2023

| | | |
|---|---|---|
| ಪಿರ್ಯಾದಿದಾರರುಃ | ವಿರುದ್ಧ | ಆರೋಪಿತರು |
| ಸರ್ಕಾರದ ಪರವಾಗಿ<br>ಮಲೆಬೆನ್ನೂರು ಪೋಲೀಸ್ ಠಾಣೆ | | ಶ್ರೀಮತಿ ಯಶೋಧಮ್ಮ ಹಾಗೂ<br>ಇನ್ನೊಬ್ಬರು |

## ದೋಷಾರೋಪಣೆ

ಶ್ರೀಮತಿ ವೀಣಾ ಕೋಳೆಕರ, 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಆದ ನಾನು ನಿಮ್ಮ ಮೇಲೆ ಅಂದರೆಃ

1. ಶ್ರೀಮತಿ ಯಶೋಧಮ್ಮ ಗಂಡ ಶಿವಾಲಯ್ಯ, 49 ವರ್ಷ,
2. ಗಜೇಂದ್ರ ತಂದೆ ಶಿವಾಲಯ್ಯ , 26 ವರ್ಷ,

ಇಬ್ಬರ ವಾಸಃ ನಂದಿಗುಡಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಹೊರಿಸುವ ಆರೋಪಣೆ ಏನೆಂದರೆಃ

ಆರೋಪಿತರು ಹಾಗು ಚಾಸಾ.1 ರವರು ಸಹೋದರ ಸಂಬಂಧಿಗಳಾಗಿದ್ದು, ಅವರಿಬ್ಬರ ನಡುವ ಜಮೀನಿನ ವಿಚಾರವಾಗಿ ಮನಸ್ತಾಪವಿದ್ದು, ಆರೋಪಿತರು ಚಾಸಾ,1 ರವರ ಹೊಲದ ಮೂಲಕ ಜಮೀನಿನ ನೀರಾವರಿಗೆ ಪೈಪ್ ಗಳನ್ನು ಹಾಕಿಕೊಂಡಿದ್ದು, ಸದರಿ ಪೈಪ್ ಗಳು ಹೊಲ ಉಳುಮೆ ಮಾಡುವ ಸಮಯದಲ್ಲಿ ಒಡೆದಿದ್ದು, ಆ ವಿಚಾರವಾಗಿ ಆರೋಪಿತರು ದಿನಾಂಕಃ 22.05.2023 ರಂದು ಬೆಳಿಗ್ಗೆ 11.30 ಗಂಟೆ ಸಮಯದಲ್ಲಿ ಚಾಸಾ.1 ರವರೊಂದಿಗೆ ಜಗಳ ಮಾಡುವ ಸಮಾನ ಉದ್ದೇಶದಿಂದ ಮಲೇಬೆನ್ನೂರು ಪೊಲೀಸ್ ಠಾಣಾ ಸರಹದ್ದಿನ ನಂದಿಗುಡಿ ಗ್ರಾಮದಲ್ಲಿರುವ ಚಾಸಾ.1 ರವರ ಮನೆಗೆ ಅಕ್ರಮ ಪ್ರವೇಶ ಮಾಡಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.448 ಸಹ ಕಲಂ.34 ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮುಂದುವರೆದು, ಅದೇ ದಿನ, ಸಮಯ, ಸ್ಥಳ ಮತ್ತು ಅದೇ ಸಂದರ್ಭದಲ್ಲಿ, ಆರೋಪಿತರಾದ ನೀವು ಚಾಸಾ.1, 4 ಮತ್ತು 5 ರವರಿಗೆ ಅವಮಾನ ಮಾಡಿ ಅದರಿಂದ ಅವರು ಉದ್ರೇಕಗೊಂಡು ಶಾಂತಿ ಭಂಗವನ್ನುಂಟು ಮಾಡಲೆಂಬ ಸಮಾನ ಉದ್ದೇಶದಿಂದ ಚಾಸಾ.1, 4 ಮತ್ತು 5 ರವರಿಗೆ 'ಮಿಂಡ್ರಿ' ಎಂದು ಅವಾಚ್ಯ ಶಬ್ಧಗಳಿಂದ ಬೈದಾಡಿ ಅವರಿಗೆ ಅವಮಾನವಾಗುವಂತೆ ಮಾಡಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಸಹ ಕಲಂ.34 ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮುಂದುವರೆದು, ಅದೇ ದಿನ, ಸಮಯ, ಸ್ಥಳ ಮತ್ತು ಅದೇ ಸಂದರ್ಭದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ನಿಮ್ಮಲ್ಲಿಯ 1 ನೇ ಆರೋಪಿ ಕಲ್ಲಿನಿಂದ ಮತ್ತು 2 ನೇ ಆರೋಪಿಯು ಒಂದು ಕೋಲಿನಿಂದ ಚಾಸಾ.4 ರವರ ಸೊಂಟಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.324

ಸಹಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮುಂದುವರೆದು, ಅದೇ ದಿನ, ಸಮಯ, ಸ್ಥಳ ಮತ್ತು ಅದೇ ಸಂದರ್ಭದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ನಿಮ್ಮಲ್ಲಿಯ 2 ನೇ ಆರೋಪಿ ಚಾಸಾ.5 ರವರ ಬಲಕೈ ತಿರುವಿ, ಕೈನಿಂದ ಬೆನ್ನಿಗೆ ಹೊಡೆದು, 1 ನೇ ಆರೋಪಿ ಚಾಸಾ,1 ರವರನ್ನು ನೆಲಕ್ಕೆ ದೂಡಿ ಕೈಕಾಲುಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.323 ಸಹಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮುಂದುವರೆದು, ಅದೇ ದಿನ, ಸಮಯ, ಸ್ಥಳ ಮತ್ತು ಅದೇ ಸಂದರ್ಭದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ಚಾಸಾ.1, 4 ಮತ್ತು 5 ರವರಿಗೆ 'ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ' ಎಂದು ಜೀವ ಬೆದರಿಕೆ ಹಾಕಿಸಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ಸಹ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮೇಲಿನ ದೋಷಾರೋಪಣೆ ಕುರಿತು ನಿಮ್ಮ ವಿರುದ್ಧ ನನ್ನ ಮುಂದೆ ವಿಚಾರಣೆ ನಡೆಸಲಾಗುತ್ತದೆ ಅಂತ ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಮೇಲ್ಕಂಡ ಆಪಾದನೆಯ ಸಾರಾಂಶವನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ್ದು, ಈ ದಾಖಲೆಯು ಆತನು ನೀಡಿದ ಹೇಳಿಕೆಯ ಪೂರ್ಣವಾದ ಹಾಗೂ ಸತ್ಯವಾದ ಅಂಶಗಳನ್ನು ಒಳಗೊಂಡಿದೆ )

Sd/-

ದಿನಾಂಕಃ
ಸ್ಥಳಃ ಹರಿಹರ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.